# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority


ಸಂಖ್ಯೆ :
No. ಬೆಂ.ಅ.ಪ್ರಾ/ಅಸ/ಅಅ-1/ತಾಸ-9/ಪ್ರಾಪ್ರ.ಪ/ಟಿ-230 /2023-24

ದಿನಾಂಕ :
Date : 20/01/2025.

ಅಭಿಯಂತರ ಸದಸ್ಯರವರ ಕಛೇರಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

ಅನುಸೂಚಿ-7
(ಉಪವಿಧಿ ಸಂಖ್ಯೆ: 5.3)
**ಪ್ರಾರಂಭಿಕ ಪ್ರಮಾಣ ಪತ್ರ**

ಇವರಿಗೆ,

M/s JRC Projects
No.313, Rainbow Residency
Kaikondanahalli Village
Wipro, Sarjapura Road,
Bangalore-560 035.

ಮಾನ್ಯರೆ,

ವಿಷಯ: ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ರಾಯಸಂದ್ರ ಗ್ರಾಮದ ಸರ್ವೆ ನಂ.31, 32, 110(ಪಿ) ಮತ್ತು 111/2 ರಲ್ಲಿನ ಒಟ್ಟಾರೆ 12ಎಕರೆ 03ಗುಂಟೆ ಅಥವಾ 48865.81 ಚ.ಮೀ ವಿಸ್ತೀರ್ಣದ ಪ್ರದೇಶದಲ್ಲಿ ಕಟ್ಟಡ-3 ರಲ್ಲಿ ತಳ+ನೆಲ+04 ಮೇಲಂತಸ್ತುಗಳನ್ನೊಳಗೊಂಡ 105 ವಸತಿ ಘಟಕಗಳ ಬಹುವಸತಿ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಕುರಿತು.

ಉಲ್ಲೇಖ:
1. ನಕ್ಷೆ ಮಂಜೂರಾತಿಯಾದ ಪತ್ರ ಸಂಖ್ಯೆ: ಬೆಂ.ಅ.ಪ್ರಾ/ನಮ/ಅಸ/ಅಅ-1/ತಾಸ-4/ ಪೂ/ 33/2023-24, ದಿನಾಂಕ: 11.10.2023.
2. ತಮ್ಮ ಅರ್ಜಿ ದಿನಾಂಕ: 19.11.2024.
3. ಮಾನ್ಯ ಆಯುಕ್ತರು ರವರ ಆದೇಶ ಸಂಖ್ಯೆ: 5128, ದಿನಾಂಕ: 07.01.2025

********

ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ರಾಯಸಂದ್ರ ಗ್ರಾಮದ ಸರ್ವೆ ನಂ.31, 32, 110(ಪಿ) ಮತ್ತು 111/2 ರಲ್ಲಿನ ಒಟ್ಟಾರೆ 12ಎಕರೆ 03ಗುಂಟೆ ಅಥವಾ 48865.81 ಚ.ಮೀ ವಿಸ್ತೀರ್ಣದ ಪ್ರದೇಶದಲ್ಲಿ ಅನುಮೋದನೆಗೊಂಡಿರುವ ಅಭಿವೃದ್ಧಿ ಯೋಜನೆಯಲ್ಲಿನ ಕಟ್ಟಡ-3 & 4 ರಲ್ಲಿನ ತಳ+ನೆಲ+04ಮೇಲಂತಸ್ತುಗಳನ್ನೊಳಗೊಂಡ 115 ವಸತಿ ಘಟಕಗಳ ಕಟ್ಟಡಕ್ಕೆ ಬೆಂ.ಅ.ಪ್ರಾ/ನಮ/ಅಸ/ಅಅ-1 /ತಾಸ-4/ಪೂ/33/2023-24, ದಿನಾಂಕ: 11.10.2023 ರಲ್ಲಿ ನಕ್ಷೆ ಮಂಜೂರಾತಿ ನೀಡಲಾಗಿರುತ್ತದೆ.

ಮುಂದುವರೆದಂತೆ ಉಲ್ಲೇಖ (2) ರ ಅರ್ಜಿಯ ಮೇರೆಗೆ ಕಟ್ಟಡ-3 ಕಟ್ಟಡದ ಆವರಣವನ್ನು ಕಾರ್ಯಪಾಲಕ ಅಭಿಯಂತರರು (ಪೂರ್ವ) ರವರು ದಿನಾಂಕ: 26.11.2024 ರಂದು ಪರಿವೀಕ್ಷಣೆ ನಡೆಸಲಾಗಿ ಮತ್ತು ಗುರುತು ಮಾಡಿ ನಿರ್ಮಿಸಿದ ಅಡಿಪಾಯವನ್ನು ಹಾಗೂ ಕೂಡಿಸಿದ ಅಂಕಣವನ್ನು ಹೋಲಿಸಿ ಪರಿವೀಕ್ಷಿಸಿ "ಬಹುವಸತಿ" ಕಟ್ಟಡದ ಕಾಮಗಾರಿಯು ಮಂಜೂರಾದ ನಕ್ಷೆಯ ಮೇರೆಗೆ ಇರುವುದಾಗಿ ವರದಿ ನೀಡಿರುತ್ತಾರೆ.

ಆಯುಕ್ತರ ಪರವಾಗಿ 20/1/25
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

ಪುಟ ಸಂಖ್ಯೆ (2) ಕ್ಕೆ ಮುಂದುವರೆದಿದೆ.....

ಅದರಂತೆ, ಸದರಿ ಪ್ರಸ್ತಾವನೆಯನ್ನು ಆಯುಕ್ತರವರಿಗೆ ಸಲ್ಲಿಸಲಾಗಿದ್ದು, ಆಯುಕ್ತರವರ ಆದೇಶ ಸಂಖ್ಯೆ.5128, ದಿನಾಂಕ: 07.01.2024 ರಂದು ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ರಾಯಸಂದ್ರ ಗ್ರಾಮದ ಸರ್ವೆ ನಂ.31, 32, 110(ಪಿ) ಮತ್ತು 111/2 ರಲ್ಲಿನ ಒಟ್ಟಾರೆ 12ಎಕರೆ 03ಗುಂಟೆ ಅಥವಾ 48865.81 ಚ.ಮೀ ವಿಸ್ತೀರ್ಣದ ಪ್ರದೇಶದಲ್ಲಿ ಈ ಕೆಳಕಂಡ ಕಟ್ಟಡ ಕಾಮಗಾರಿಯನ್ನು ಮುಂದುವರೆಸಲು ಪ್ರಾರಂಭಿಕ ಪ್ರಮಾಣ ಪತ್ರ ಪ್ರಸ್ತಾವನೆಗೆ ಅನುಮೋದನೆ ನೀಡಿರುತ್ತಾರೆ.

| ಕ್ರ.ಸಂ | ವಿವರ | ಸರ್ವೆ ನಂ | ಕಟ್ಟಡ | ಅಂತಸ್ತು | ಎತ್ತರ | ಘಟಕ |
|---|---|---|---|---|---|---|
| 1 | ರಾಯಸಂದ್ರ | 31, 32, 110(ಪಿ) ಮತ್ತು 111/2 | ಕಟ್ಟಡ–3 | ತಳ+ನೆಲ+04ಮೇಲಂತಸ್ತು | 14.95 ಮೀ | 105 |

ಅದರಂತೆ, ಚಲನ್ ಸಂಖ್ಯೆ: GN25018193, ದಿನಾಂಕ: 13.01.2025 ರಂದು ರೂ. 8,46,150/– ಗಳನ್ನು ಪ್ರಾರಂಭಿಕ ಪ್ರಮಾಣ ಪತ್ರ ಶುಲ್ಕವನ್ನು ಪ್ರಾಧಿಕಾರಕ್ಕೆ ಪಾವತಿಸಿದ್ದು, ಸದರಿ **"ಬಹುವಸತಿ"** ಕಟ್ಟಡದ ಕಾಮಗಾರಿಯನ್ನು ಉಲ್ಲೇಖ (3) ರಂತೆ ಮುಂದುವರೆಸಲು ಈ ಕೆಳಕಂಡ ಷರತ್ತುಗೊಳಪಡಿಸಿ ಅನುಮತಿ ನೀಡಿದೆ.

1. ಕಾಮಗಾರಿಯಲ್ಲಿ ಯಾವುದೇ ಮಿತಿಮೀರುವಿಕೆ, ಬದಲಾವಣೆಗಳನ್ನು ಮಾಡದೆ ಅಥವಾ ನಿಯಮ ಉಪವಿಧಿಯನ್ನು ಉಲ್ಲಂಘಿಸದಂತೆ ಮಂಜೂರಾದ ಯೋಜನೆಯ ಪ್ರಕಾರ ಕಟ್ಟು ನಿಟ್ಟಾಗಿ ಕಾಮಗಾರಿಯನ್ನು ನಡೆಸತಕ್ಕದ್ದು.
2. ಕಾಮಗಾರಿಯು, ಅಂಕಣಗಳನ್ನು ಮಾಡಿಸುವ ಕಾರ್ಯ ಮುಕ್ತಾಯದ ಹಂತವನ್ನು ತಲುಪಿದಾಗ, ಕಾಮಗಾರಿಯ ಪ್ರಗತಿಯ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ತಿಳಿಸುವ ಮೂಲಕ ಮಂಜೂರಾದ ನಕ್ಷೆ, ನಿಯಮಗಳು ಉಪವಿಧಿಗಳ ಮೇರೆಗೆ ನಿರ್ಮಾಣ ಕಾರ್ಯವು ನಡೆಗಿರುವ ಬಗ್ಗೆ ಪರೀಕ್ಷೆ ನಡೆಸಲು ಪ್ರಾಧಿಕಾರಕ್ಕೆ ಅನುಕೂಲ ಕಲ್ಪಿಸಿ ಕೊಡಬೇಕು.
3. ನಕ್ಷೆ ಮಂಜೂರಾತಿಯಲ್ಲಿ ವಿಧಿಸಿರುವ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು, ತಪ್ಪಿದ್ದಲ್ಲಿ ನೀಡಲಾಗಿರುವ ನಕ್ಷೆ ಮಂಜೂರಾತಿಯನ್ನು ರದ್ದು ಪಡಿಸುವುದಲ್ಲದೇ ಸ್ವಾಧೀನಾನುಭವ ಪತ್ರವನ್ನು ನೀಡಲಾಗುವುದಿಲ್ಲ.

Shamanarayana 20/1/25
ಆಯುಕ್ತರ ಪರವಾಗಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

ಪ್ರತಿಯನ್ನು:–

- ಕಾರ್ಯಪಾಲಕ ಅಭಿಯಂತರರು (ಪೂ) ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.